# ಕುಂಡದಲ್ಲಿ ನಿಂಬೆಹಣ್ಣಿನ ಗಿಡ



ತಾರಸಿ ಕೃಷಿಯಲ್ಲಿ ಯಥೇಚ್ಛವಾಗಿ ತರಕಾರಿ ಮತ್ತು ಹಣ್ಣುಗಳನ್ನು ಬೆಳೆದ ಸುಳ್ಯ ತಾಲ್ಲೂಕಿನ ಕಲ್ಲುಗುಂಡಿಯ ಯಶೋದ ಲೋಕನಾಥ ಪೆಲ್ತಡ್ಕ ತಮ್ಮ ಆಸಕ್ತಿಯನ್ನು ಮುಂದುವರಿಸುತ್ತಿದ್ದಾರೆ. ಚಿಕ್ಕ ಕುಂಡದಲ್ಲಿ ನಿಂಬೆ ಹಣ್ಣಿನ ಸಸಿಯನ್ನು ನೆಟ್ಟು ಪೋಷಿಸಿ ,ಅದು ಒಂದೇ ಸಲಕ್ಕೆ ನೂರಾರು ನಿಂಬೆಹಣ್ಣುಗಳ ಫಲ ನೀಡಿದೆ. ನಿಂಬೆ ಬೆಳೆಯಲು ಬೇಕಾದ ವಾತಾವರಣ ಅಲ್ಲಿ ಇಲ್ಲದಿದ್ದರೂ ಇದನ್ನು ಪೋಷಿಸಿರುವುದರ ಹಿಂದೆ ಇರುವ ಅವರ ಶ್ರಮ ಶ್ಲಾಘನೀಯ.

**-ಸಂಗೀತ ರವಿರಾಜ್, ಮಡಿಕೇರಿ**




# ಪ್ಲಾಸ್ಟಿಕ್ ಹಾವಳಿ ಸಂದೇಶ

ಪರಿಸರ ದಿನಾಚರಣೆಯ ಅಂಗವಾಗಿ ಕಲಾವಿದ ಜನಾರ್ಧನ್ ಹಾವಂಜೆಯವರ ಪರಿಕಲ್ಪನೆಯಲ್ಲಿ ಮೂಡಿದ 12 ಅಡಿ ಉದ್ದದ ಮೀನಿನ ಕಲಾಕೃತಿಯನ್ನು ಮಲ್ಪೆ ಬೀಚ್ ಅಭಿವೃದ್ಧಿ ಸಮಿತಿ ಪ್ರದರ್ಶನಕ್ಕಿಟ್ಟಿತ್ತು. ಪಶು, ಪಕ್ಷಿ, ಮೀನುಗಳು ನಾವು ಎಸೆದ ಪ್ಲಾಸ್ಟಿಕ್ ವಸ್ತುಗಳನ್ನು ತಿಂದು ಆಪತ್ತಿಗೆ ಸಿಲುಕುವ ಕುರಿತ ಜಾಗೃತಿ ಜನರ ಗಮನ ಸೆಳೆಯಿತು. ಪರಿಸರ ರಕ್ಷಣೆಯ ಮೊದಲ ಆದ್ಯತೆ ಪ್ಲಾಸ್ಟಿಕ್ ಮಾಲಿನ್ಯ ಹಿಮ್ಮೆಟ್ಟಿಸುವುದು ಎಂಬ ಸಂದೇಶ ರವಾನೆಯಾಗಿದೆ.

ಅಂದ ಹಾಗೆ ಈ ಮೀನು ನುಂಗಿದ ತ್ಯಾಜ್ಯ ಪ್ಲಾಸ್ಟಿಕ್ ಬರೋಬ್ಬರಿ 700 ಕೆಜಿ! ಇದನ್ನು ಹತ್ತು ದಿನದಲ್ಲಿ ಬೀಚ್ ಸುತ್ತಮುತ್ತ ಸ್ವಚ್ಛತೆಯ ಸಲುವಾಗಿ ಸಂಗ್ರಹಿಸಿದ್ದು ಎಂಬುದು ದುಃಖಕರವೂ ಹೌದು !

**-ಜಗಜೀವನ್ ಶೆಟ್ಟಿ ಎಂ., ಉಡುಪಿ**

# ಬಿರಸಾ ಮುಂಡಾ ಶಿಲ್ಪ

ಮಧ್ಯ ಪ್ರದೇಶದ ಅಮರ್‌ಕಂಠಕದಲ್ಲಿ ಇಂದಿರಾಗಾಂಧಿ ಬುಡಕಟ್ಟು ವಿಶ್ವವಿದ್ಯಾನಿಲಯದ ಉದ್ಯಾನವನದಲ್ಲಿ ಬುಡಕಟ್ಟು ಜನಾಂಗದಲ್ಲಿ ಪ್ರಸಿದ್ಧನಾದ ಬಿರಸಾ ಮುಂಡಾ ಅವರ 15– 18 ಅಡಿ ಎತ್ತರದ ಕಲಾಕೃತಿಯನ್ನು ರಚಿಸಲಾಗಿತ್ತು. ಮುಂಡಾ ಗೆರಿಲ್ಲಾ ಯುದ್ಧ ತಂತ್ರಕ್ಕೆ ನಿಪುಣನಾಗಿದ್ದು, ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿರುವ ಘಟನೆಯನ್ನು ನೆನಪಿಸುವ ಶಿಲ್ಪವನದಲ್ಲಿ ಇದು ಎಲ್ಲರ ಆಕರ್ಷಣೀಯ ಬಿಂದುವಾಗಿದೆ. ನಮ್ಮ ಬೆಂಗಳೂರಿನ ಕಲಾವಿದ ಶಿವಕುಮಾರ್ ಮತ್ತು ತಂಡದವರು ಬೇರೆ ರಾಜ್ಯಕ್ಕೆ ಹೋಗಿ ಇಂತಹ ವಿಶಿಷ್ಟ ಶಿಲ್ಪವನ್ನು ಮಾಡಿರುವುದು ನಮ್ಮ ರಾಜ್ಯದ ಹಿರಿಮೆಯೇ ಸರಿ.

**-ಬಳಕೂರು ವಿ.ಎಸ್. ನಾಯಕ, ಬೆಂಗಳೂರು**

